# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 11
2. ಸದಸ್ಯರ ಹೆಸರು : ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 04-07-2023
4. ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವರಾಹಿ ಜಲಾಶಯದಿಂದ ಉಡುಪಿ ನಗರಕ್ಕೆ ಶುದ್ಧ ಕುಡಿಯುವ ನೀರಿನ ಸರಬರಾಜು ಯೋಜನೆ (ಅಮೃತ್ ಯೋಜನೆ) ಯಾವಾಗ ಪ್ರಾರಂಭವಾಯಿತು; ಈ ಯೋಜನೆಯ ವಿವರಗಳೇನು; (ಯೋಜನೆಯ ಅಂದಾಜು ಮೊತ್ತ, ಪ್ರಾರಂಭವಾದ ದಿನಾಂಕ ಸೇರಿದಂತೆ ಸಂಪೂರ್ಣ ವಿವರ ಒದಗಿಸುವುದು) | • ಕೆಯುಐಡಿಎಫ್‌ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಮತ್ತು ಹೂಡಿಕೆ ಕಾರ್ಯಕ್ರಮದಡಿ (ಕ್ವಿಮಿಪ್ - ಜಲಸಿರಿ) ರಾಜ್ಯದ ಆಯ್ದ ಎಂಟು (8) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ/ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>• ಕ್ವಿಮಿಪ್ ಯೋಜನೆಯನ್ನು 2 ಟ್ರಾಂಚ್‌ಗಳಾಗಿ ವಿಂಗಡಿಸಲಾಗಿದ್ದು, ಟ್ರಾಂಚ್-1 ನಾಲ್ಕು (4) ನಗರ ಸ್ಥಳೀಯ ಸಂಸ್ಥೆಗಳಾದ ದಾವಣಗೆರೆ, ಹರಿಹರ, ರಾಣೆಬೆನ್ನೂರು ಮತ್ತು ಬ್ಯಾಡಗಿ ನಗರ/ ಪಟ್ಟಣಗಳನ್ನು ಒಳಗೊಂಡಿರುತ್ತದೆ.<br><br>• ಟ್ರಾಂಚ್-2 ನಾಲ್ಕು (4) ನಗರ ಸ್ಥಳೀಯ ಸಂಸ್ಥೆಗಳಾದ ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರ ನಗರ/ಪಟ್ಟಣಗಳನ್ನು ಒಳಗೊಂಡಿರುತ್ತದೆ.<br><br>• ಉಡುಪಿ ನಗರದಲ್ಲಿ, ವರಾಹಿ ನದಿ ಮೂಲದಿಂದ ಉಡುಪಿ ನಗರಕ್ಕೆ ಶುದ್ಧ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಅಮೃತ್ ನೆರವಿನೊಂದಿಗೆ ಟ್ರಾಂಚ್-2 ನಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು ವಿವರಗಳು ಈ ಕೆಳಗಿನಂತಿವೆ.<br><br>➢ ಕಾಮಗಾರಿ ಪ್ರಾರಂಭ ದಿನಾಂಕ: 23.08.2019<br>➢ ಅಂದಾಜು ಮೊತ್ತ: ರೂ.119.51 ಕೋಟಿ<br>➢ ಗುತ್ತಿಗೆದಾರರು: ಮೇ\|\| ಡಿ.ಆರ್.ಎಸ್. ಇನ್ಫ್ರಾಟೆಕ್ ಪ್ರೈ.ಲಿ<br>➢ ಪೂರ್ಣಗೊಳ್ಳುವ ದಿನಾಂಕ: 13.05.2024<br>➢ ಭೌತಿಕ ಪ್ರಗತಿ: 73.28%<br>➢ ಆರ್ಥಿಕ ಪ್ರಗತಿ:75.71% (ರೂ.89.26 ಕೋಟಿಗಳು)<br><br>ಈ ಯೋಜನೆಯಲ್ಲಿ ಭರತ್‌ಕಲ್ ಜಾಕ್‌ವೆಲ್‌ನಿಂದ 864 ಮಿ.ಮೀ ವ್ಯಾಸದ ಕೊಳವೆಯ ಮುಖಾಂತರ ಕಚ್ಚಾ ನೀರನ್ನು ಹಾಲಾಡಿ ಉದ್ದೇಶಿತ ನೀರು ಶುದ್ಧೀಕರಣ ಘಟಕಕ್ಕೆ ಹಾಯಿಸಿ ಶುದ್ಧೀಕರಿಸಿದ ನೀರನ್ನು 864 ಮಿ.ಮೀ ವ್ಯಾಸದ ಕೊಳವೆಯ ಮುಖಾಂತರ ಮಣಿಪಾಲದ ನೆಲ ಮಟ್ಟದ ಜಲ ಸಂಗ್ರಹಗಾರಕ್ಕೆ ತರುವುದು ಹಾಗೂ ಈ ಕೊಳವೆಯ ಒಟ್ಟು ಉದ್ದ 38 ಕಿ.ಮೀಗಳಿರುತ್ತದೆ. |
| (ಆ) | ನಗರಸಭೆ ವ್ಯಾಪ್ತಿಯೊಂದಿಗೆ ಯಾವ ಯಾವ ಗ್ರಾಮ ಪಂಚಾಯತ್‌ಗಳಿಗೆ ಸದರಿ ಯೋಜನೆಯಡಿ ನೀರು ಸರಬರಾಜು ಮಾಡಲು ಯೋಜನೆ ಹಮ್ಮಿಕೊಳ್ಳಲಾಗಿದೆ; | ಸದರಿ ಯೋಜನೆಯಡಿ ಶುದ್ಧ ಕುಡಿಯುವ ನೀರು ಒದಗಿಸಲು ಉದ್ದೇಶಿಸಿರುವ ಗ್ರಾಮಗಳ ಪಟ್ಟಿಯನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಇ) | ಸದರಿ ಯೋಜನೆ ಕಾರ್ಯ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು; | ಪ್ರಸ್ತುತ, ಶೇ.73.28 ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಿದ್ದು ಈ ಕೆಳಕಂಡ ಕಾರಣಗಳಿಂದ ಯೋಜನೆ ವಿಳಂಬವಾಗಿರುತ್ತದೆ.<br>• ಪೈಪ್ ಲೈನ್ ಹಾದು ಹೋಗುವ ಮಾರ್ಗ ಮಧ್ಯ ಗ್ರಾಮದವರು ರಿಟ್ ಪಿಟಿಷನ್ 20370/2018ನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿದ ಕಾರಣ, ಅರ್ಜಿ ಸಮಿತಿಯವರ ಸೂಚನೆಯಂತೆ ಮಾರ್ಗ ಮದ್ಯ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ನೀರು ಶುದ್ಧೀಕರಣ ಘಟಕವನ್ನು ಬಜೆಯಿಂದ ಭರತ್ಕಲ್‌ಗೆ ಸ್ಥಳಾಂತರಿಸಲಾಗಿರುತ್ತದೆ<br>• ಕೋವಿಡ್-19 ಸಾಂಕ್ರಾಮಿಕ ಪಿಡುಗು<br>• ಅರಣ್ಯ ಇಲಾಖೆ, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇಲಾಖೆಗಳಿಂದ ಅನುಮತಿ ಸಕಾಲದಲ್ಲಿ ದೊರೆತಿರುವುದಿಲ್ಲ.<br>ಅಲ್ಲದೇ, ಆರು(6) ನದಿಗಳಿಗೆ ಸೇತುವೆ ನಿರ್ಮಾಣ ಮಾಡಿ ಕೊಳವೆ ಮಾರ್ಗ ಅಳವಡಿಸಬೇಕಾಗಿರುವುದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಳಂಭವಾಗಿರುತ್ತದೆ. |
| (ಈ) | ಜಲಾಶಯದಿಂದ ಉಡುಪಿ ನಗರಕ್ಕೆ ನೀರಿನ ಪೈಪ್ ಲೈನ್ ಹಾದು ಹೋಗುವ ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ನೀರಿನ ಸಂಪರ್ಕ ಒದಗಿಸಲು ಸರ್ಕಾರದ ನಿಲುವೇನು; | ವರಾಹಿ ನದಿ ಮೂಲದಿಂದ ಪೈಪ್ ಲೈನ್ ಹಾದು ಹೋಗುವ ಗ್ರಾಮಗಳಿಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರ ಕೋರಿಕೆಯಂತೆ 16.21 ಎಂಎಲ್‌ಡಿ ನೀರನ್ನು ಒದಗಿಸಲು ಕ್ರಮ ವಹಿಸಲಾಗಿದೆ. ಗ್ರಾಮದ ವಿವರಗಳನ್ನು ಲಗತ್ತಿಸಲಾಗಿದೆ. |
| (ಉ) | ಸದರಿ ಕುಡಿಯುವ ನೀರಿನ ಯೋಜನೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಹಾಗೂ ಕಾಪು ಪುರಸಭೆಗೆ ಯೋಜನೆಯನ್ನು ವಿಸ್ತರಿಸುವುದರೊಂದಿಗೆ ಯೋಜನೆ ಹಾದು ಹೋಗುವ ಗ್ರಾಮ ಪಂಚಾಯತ್‌ಗಳಿಗೆ ನೀರು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ವರಾಹಿ ಜಲಾಶಯದಿಂದ ಉಡುಪಿ ನಗರಕ್ಕೆ ಶುದ್ಧ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ದಿನಾಂಕ:13.05.2024 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.<br><br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕಾಪು ಪುರಸಭೆ ಮತ್ತು ಮಾರ್ಗ ಮಧ್ಯೆ ಬರುವ 7 ಹಳ್ಳಿಗಳಿಗೆ ಉದ್ಯಾವರ ನದಿಯನ್ನು ಮೂಲವಾಗಿರಿಸಿ ಕುರ್ಕಾಲು ಕಿಂಡಿ ಅಣೆಗಟ್ಟಿನಿಂದ ಮುಂದಿನ 30 ವರ್ಷಗಳ ಬೇಡಿಕೆಗೆ ಅನುಸಾರ ರೂಪಿಸಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಪ್ರಸ್ತುತ ಶೇಕಡಾ 60 ರಷ್ಟು ಕಾಮಗಾರಿಗಳು ಪೂರ್ಣಗೊಂಡಿದ್ದು ಹಾಗೂ ಮಾರ್ಚ್-2024 ರ ಒಳಗಾಗಿ ಯೋಜನೆಯನ್ನು ಚಾಲನೆಯಗೊಳಿಸಲು ಉದ್ದೇಶಿಸಲಾಗಿದೆ. ಪುರಸಭೆಗೆ ಯೋಜನೆಯನ್ನು ವಿಸ್ತರಿಸುವುದು ಕ್ವಿಮಿಪ್ ವ್ಯಾಪ್ತಿಗೆ ಒಳಪಡುವುದಿಲ್ಲ. |

ಕಡತ ಸಂಖ್ಯೆ: ನಅಇ 86 ಪಿ.ಆರ್.ಜೆ 2023

(ಬಿ. ಎಸ್. ಸುರೇಶ)

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು.

ಅನುಬಂಧ-1

| ಕ್ರ.ಸಂ | ಗ್ರಾಮ ಪಂಚಾಯಿತಿ | ಗ್ರಾಮ | ಸಗಟು ನೀರಿನ ಪ್ರಮಾಣ (ಎಂಎಲ್ ಡಿ) |
|---|---|---|---|
| 1 | Halady | Halady-28 | 0.10 |
| 2 | Halady | Halady-76 | 0.22 |
| 3 | Alevoor | Alevoor | 0.58 |
| 4 | Manipura | Manipura & Marne | 0.58 |
| 5 | Alevoor | Korangrapady | 0.46 |
| 6 | Ambalapadi | Ambalapadi | 0.19 |
| 7 | Ambalapadi | Kidiyoor | 0.43 |
| 8 | Badanidiyoor | Badanidiyur | 0.37 |
| 9 | Kadekar | Kadekar | 0.44 |
| 10 | Kadekar | Kuthpadi | 0.32 |
| 11 | Kalyanapura | Thonse East | 0.73 |
| 12 | Kemmannu | Paduthonse | 0.74 |
| 13 | Thenkanidiyoor | Kelarkalabettu | 0.38 |
| 14 | Thenkanidiyoor | Thenkanidiyoor | 0.57 |
| 15 | Udyavara | Udyavara | 1.09 |
| 16 | Kukkehalli | Bellampalli & Kukeehalli | 0.49 |
| 17 | Uppor | Uppor | 0.57 |
| 18 | Hanehalli, Shiriyara, Yadthadi | Hanehalli, Shiriyara, Heradi And Yedthadi | 1.12 |
| 19 | 38 Kalathuru, Nalkuru Gp | 38 Kalthur, Kenjoor, Nancharu, Nalkoor | 0.84 |
| 20 | Kokkarne | 34 Kudi, Pejamangoor | 0.59 |
| 21 | Neelavara | Neelavar | 0.25 |
| 22 | Heggunje | 33 Shiroor, Heggunje | 0.42 |
| 23 | Kadoor | Kadur , Nadur | 0.33 |
| 24 | Aroor | Aroor | 0.26 |
| 25 | Avarse | Avarse, Hiliyana & Kakkunje | 0.45 |
| 26 | Billadi | Billadi & Vandar | 0.32 |
| 27 | Cherkardi & Karje | Cherkady & Karje | 0.80 |
| 28 | Chantharu | 52 Heroor & Chanthar | 0.75 |
| 29 | Handady | Handhady, Matapady, Kumragodu | 0.50 |
| 30 | Harady & Varamballi | Baikady, Harady, Varamballi | 1.02 |
| 31 | Havanje | Havanje | 0.27 |
| | ಒಟ್ಟು | 51 | 16.21 |

ವ್ಯವಸ್ಥಾಪಕ ನಿರ್ದೇಶಕರು
ಕೆಯುಐಡಿಎಫ್‌ಸಿ
ಬೆಂಗಳೂರು